ಕ್ರಿ. ಮಿ. ನಂಬರಃ **661/ 2023**

ಪಿಡಬ್ಲೂ**-1**

**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ**

| | | |
|---|---|---|
| ಸಾಕ್ಷಿದಾರರ ಹೆಸರು | : | ಲಕ್ಷ್ಮಿ ಅಪ್ಪಯ್ಯಾ ಹಳ್ಳೂರ |
| ವಯಸ್ಸು | : | 23 ವರ್ಷ |
| ಉದ್ಯೋಗ | : | ಮನೆ ಕೆಲಸ |
| ಸಾಕೀನ | : | ಬೇಟಗೇರಿ |

ದಿಃ **19-08-2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಿಂದ

2 ಮತ್ತು 3 ಅರ್ಜಿದಾರರು ನನ್ನ ಹಾಗೂ ಎದುರುದಾರನ ಮಕ್ಕಳು ಆಗಿರುತ್ತಾರೆ. ಎದುರುದಾರ ನನ್ನ ಗಂಡನಾಗಬೇಕು. ನನ್ನ ಹಾಗೂ ಎದುರುದಾರನ ಮದುವೆ 10 ವರ್ಷಗಳ ಹಿಂದೆ ವೆಂಕಟಾಪುರ ಗ್ರಾಮದ ಮಾದವಾನಂದ ಮಠದಲ್ಲಿ ನಮ್ಮ ಜಾತಿ ರಿವಾಜು ಪ್ರಕಾರ ಆಗಿರುತ್ತದೆ. ಮದುವೆ ಆದ ನಂತರ ನಾನು ಬಾಳ್ವೆ ಮಾಡಲು ಗಂಡನ ಮನೆಗೆ ಹೋಗಿರುತ್ತೇನೆ. ನನ್ನ ಗಂಡನ ಮನೆಯಲ್ಲಿ ನನ್ನ ಮಾವ, ಇಬ್ಬರು ಅತ್ತೆಯರು, ಮೈದುನ, ನಾನು ಹಾಗೂ ನನ್ನ ಗಂಡ ವಾಸವಾಗಿದ್ದೆವು. ನನ್ನ ಹಾಗೂ ಎದುರುದಾರನ ವೈವಾಹಿಕ ಜೀವನದಿಂದ 2 ಮತ್ತು 3 ನೇ ಅರ್ಜಿದಾರರು ಸಂತಾನ ಜನಿಸಿರುತ್ತಾರೆ. ನಮ್ಮ ಮದುವೆಯಾದ 2 ವರ್ಷಗಳವರೆಗೆ ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. ಆ ನಂತರ ನನ್ನ ಗಂಡ ಕುಡಿದು ಬಂದು ನನ್ನನ್ನು ಹೊಡಿ ಬಡಿ ಮಾಡುತ್ತಿದ್ದರು ಹಾಗೂ ನನ್ನ ಮಾವ ನನ್ನನ್ನು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಸದರಿಯವರು ನನ್ನನ್ನು ಸಂಶಯ ಮಾಡಿ ಅವರನ್ನು ಇವರನ್ನು ನೋಡುತ್ತಿ ಎಂದು ಹೊಡಿ ಬಡಿ ಮಾಡುತ್ತಿದ್ದರು. ಆ ನಂತರ ನಾನು ಈ ಕುರಿತು ಮಾನ್ಯ ನ್ಯಾಯಾಲಯದಲ್ಲಿ ಕ್ರಿ ಮಿಸ್ ನಂಬರ್ 383/2018 ರಂತೆ ಪೋಟಗಿ ಪ್ರಕರಣವನ್ನು ದಾಖಲಿಸಿದ್ದೆ, ಸದರಿ ಪ್ರಕರಣದಲ್ಲಿ ಎದುರುದಾರ ಚೆನ್ನಾಗಿ ಇರುತ್ತಾರೆ ಎಂದು ಬರವಸೆ ನೀಡಿ ದಿಃ 25-10-2021 ರಂದು ಸದರಿ ಪ್ರಕರಣದಲ್ಲಿ ಅಪಸಾತ ಆಗಿ ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಆದರೂ ಕೂಡ ಸದರಿಯವರು ಕೆಲವು

ದಿನಗಳ ನಂತರ ಪುನಃ ಅದೇ ರೀತಿ ಹೊಡಿ ಬಡಿ ಮಾಡುವುದು ಅವಾಚ್ಯ ಶಬ್ದಗಳಿಂದ ಬೈಯುವುದು ನನಗೆ ಕಿರುಕುಳ ನೀಡುವುದು ಮಾಡಿರುತ್ತಾರೆ. ಆ ಕಾರಣ ನಾನು ಈ ಪ್ರಕರಣವನ್ನು ಸಲ್ಲಿಸಿರುತ್ತೇನೆ.

ಎದುರುದಾರ ಅಪಸಾತ ಆದ ನಂತರ 1 ವರ್ಷದವರೆಗೆ ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ ಆದರೆ 1 ವರ್ಷದ ನಂತರ ನನಗೆ ಕುಡಿದು ಬಂದು ಹೊಡಿ ಬಡಿ ಮಾಡುವುದು ಹಾಗೂ ತವರು ಮನೆಯಿಂದ 2 ಲಕ್ಷ ನಗದು ಹಣ ಮತ್ತು 5 ತೊಲೆ ಬಂಗಾರವನ್ನು ತೆಗೆದುಕೊಂಡು ಬರಲು ಕಿರುಕುಳ ನೀಡುತ್ತಿದ್ದರು. ಎದುರುದಾರ ನಾನು ನೋಡಲು ಚೆನ್ನಾಗಿ ಇರುವುದಿಲ್ಲ ಎಂದು ಹಾಗೂ ಅವರು ಮತ್ತೊಂದು ಮದುವೆಯನ್ನು ಮಾಡಿಕೊಳ್ಳುತ್ತೇನೆ ಎಂದು ನನಗೆ ಹೊಡಿ ಬಡಿ ಮಾಡುತ್ತಿದ್ದರು. ಎದುರುದಾರ ನನಗೆ ಜೀವ ಬೆದರಿಕೆ ಹಾಕಿರುತ್ತಾರೆ ಹಾಗೂ ಸದರಿಯವರ ತಲೆಯ ದಿಂಬಿನ ಕೆಳಗೆ ಕೊಡಲಿ ಮತ್ತು ಕುಡಗೋಲು ಇಟ್ಟುಕೊಂಡು ಮಲಗುತ್ತಿದ್ದರು ಹಾಗೂ ನನಗೆ ಜೀವ ಬೆದರಿಕೆಯನ್ನು ನೀಡುತ್ತಿದ್ದರು. ಈಗ ನಾನು ನಮ್ಮ ತವರು ಮನೆಯಲ್ಲಿ ವಾಸವಾಗಿದ್ದೇನೆ . ನಮ್ಮ ಹಿರಿಯರು ಎದುರುದಾರನಿಗೆ ಹಾಗೆ ಮಾಡಬಾರದೆಂದು ಬುದ್ದಿ ಮಾತು ಹೇಳಿದರು ಕೂಡ ಎದುರುದಾರ ಸುದಾರಿಸುವುದಿಲ್ಲ, ಹಾಗೂ ನನ್ನನ್ನು ಕರೆದುಕೊಂಡು ಹೋಗಲು ಬಂದಿರುವುದಿಲ್ಲ.

ನನ್ನನ್ನು ಮನೆಯಿಂದ ಹೊರ ಹಾಕಿದಾಗಿನಿಂದ ಎದುರುದಾರ ನನಗೆ ಹಾಗೂ ಮಕ್ಕಳಿಗೆ ಯಾವುದೇ ಪೋಟಗಿಯನ್ನು ಕೊಟ್ಟಿರುವುದಿಲ್ಲ. ನಾನು ಬೇರೆಯವರ ಮನೆಯಲ್ಲಿ ಕಸ ಮುಸುರಿ ಬಾಂಡೆ ಮಾಡಿ ನನ್ನ ಮಕ್ಕಳ ಶಾಲೆ ಫೀಸನ್ನು ತುಂಬಿರುತ್ತೇನೆ.

ಎದುರುದಾರನಿಗೆ ಅಂದಾಜು 6 ಎಕರೆ ಹೊಲ ಇರುತ್ತದೆ. ಸದರಿ ಜಮೀನದಲ್ಲಿ ಕಬ್ಬು ಹಾಗೂ ಕಾಯಪಲ್ಲೆ ಬೆಳೆಯುತ್ತಾರೆ. ಕಬ್ಬಿನ ಬೆಳೆಯಿಂದ ವರ್ಷಕ್ಕೆ 6 ಲಕ್ಷ ಆದಾಯ ಬರುತ್ತದೆ ಹಾಗೂ ಕಾಯಪಲ್ಲೆಯಿಂದ ವರ್ಷಕ್ಕೆ 50 ಸಾವಿರ ಆದಾಯ ಬರುತ್ತದೆ. ಇದು ಅಲ್ಲದ್ದೆ ಸದರಿಯವರು ಬೇರೆಯವರ ಹೊಲವನ್ನು ಮಾಡಿ ವರ್ಷಕ್ಕೆ 3 ಲಕ್ಷ ಆದಾಯವನ್ನು ಪಡೆಯುತ್ತಾರೆ.

 **ಕ್ರಿ. ಮಿ.** ನಂಬರಃ **661/ 2023**
ಪಿಡಬ್ಲೂ**-1**

ಈಗ ನಾನು ಈ ಪ್ರಕರಣವನ್ನು ನನಗೆ ಹಾಗೂ ನನ್ನ ಮಕ್ಕಳಿಗೆ ಪ್ರತಿ ತಿಂಗಳ ತಲಾ ರೂ. 5,000/- ನ್ನು ಪೋಟಗಿಯನ್ನು ಕೊಡಿಸಬೇಕೆಂದು ಕೇಳಿಕೊಂಡು ಸಲ್ಲಿಸುತ್ತೇನೆ. ನಮ್ಮ ತವರು ಬಡವರಾಗಿದ್ದು, ಅವರು ಕೂಡ ದುಡಿದುಕೊಂಡು ತಿನ್ನುವವರು ಆಗಿರುತ್ತಾರೆ. ನಮ್ಮ ತಂದೆ ತಾಯಿಗೆ ವಯಸ್ಸಾಗಿರುತ್ತದೆ. ಅವರಿಗೆ ನನ್ನನ್ನು ನೋಡಿಕೊಳ್ಳಲು ಆಗುವುದಿಲ್ಲ.

ಈ ದಿನ ನ್ಯಾಯಾಲಯಕ್ಕೆ 2 ಮತ್ತು 3 ನೇ ಅರ್ಜಿದಾರರ ಶಾಲಾ ದಾಖಲಾತಿಗಳನ್ನು ಹಾಜರು ಪಡಿಸಿದ್ದು , ಅವುಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-1 ಮತ್ತು 2 ಎಂದು ಗುರುತಿಸಲಾಯಿತು. ನಮ್ಮ ಮಾವನ ತಾಯಿಯ ಹೆಸರಿನಲ್ಲಿ ಇರುವ ಜಮೀನು ಸರ್ವೆ ನಂ 4/2 5 ಎಕರೆ 9 ಗುಂಟೆಗೆ ಸಂಬಂದಿಸಿದ ಪಹಣಿಯನ್ನು ಹಾಜರು ಪಡಿಸಿರುತ್ತೇನೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಅದೇ ರೀತಿ ಸರ್ವೆ ನಂ 5/3 ನೇದ್ದರ ಪಹಣಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -4 ಎಂದು ಗುರುತಿಸಲಾಯಿತು. ಕ್ರಿ ಮಿಸ್ ನಂ 333/2018 ಪ್ರಕರಣದ ಆರ್ಡರ್ ಶೀಟ್ ಹಾಜರು ಪಡಿಸಿದ್ದು ಅದನ್ನು ನಿಪಿ -5 ಎಂದು ಗುರುತಿಸಲಾಯಿತು. ಈಗ ಮಾನ್ಯ ನ್ಯಾಯಾಲಯ ನಾನು ಪ್ರಕರಣವನ್ನು ಸಲ್ಲಿಸಿದ ದಿನದಿಂದ ನನಗೆ ಪೋಟಗಿಯನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಎದುರುದಾರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಕಾರಣಗಳು ಕಂಡು ಬಂದ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

**(ಶ್ರೀಮತಿ. ಸೂರ್ಯ ಪ್ರಭಾ ಎಚ್.ಡಿ)**
**ಹೆ.ದಿ.&ನ್ಯಾದಂ., ಗೋಕಾಕ.**